# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | **1865** |
| ಸದಸ್ಯರ ಹೆಸರು | : | ಶ್ರೀ ತಿಪ್ಪಣ್ಣ ಕಮಕನೂರ (ವಿಧಾನ ಸಭೆಯಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | : | 23-03-2026 |
| ಉತ್ತರಿಸುವ ಸಚಿವರು | | ಮಾನ್ಯ ಇಂಧನ ಸಚಿವರು |

****

| | ಪ್ರಶ್ನೆ | ಉತ್ತರ |
|---|---|---|
| ಅ) | ಕಲಬುರಗಿ ಜಿಲ್ಲೆಯಲ್ಲಿ (GESCOM) ವತಿಯಿಂದ ಇದುವರೆಗೆ ಎಷ್ಟು ಮನೆಗಳಿಗೆ ಹಾಗೂ ವಾಣಿಜ್ಯ ಘಟಕಗಳಿಗೆ ಸ್ಮಾರ್ಟ್ ಮೀಟರ್ ಗಳನ್ನು ಅಳವಡಿಸಲಾಗಿದೆ: (ತಾಲ್ಲೂಕುವಾರು ಮಾಹಿತಿ ನೀಡುವುದು); | ಜೆಸ್ಕಾಂ ವ್ಯಾಪ್ತಿಯಲ್ಲಿ ಎಲ್ಲಾ ಹೊಸ ಸಂಪರ್ಕಗಳಿಗೆ ಹಾಗೂ ತಾತ್ಕಾಲಿಕ ಸಂಪರ್ಕಗಳಿಗೆ ಸ್ಮಾರ್ಟ್ ಮೀಟರ್ ಅಳವಡಿಸಲು ದಿನಾಂಕ 5.2.2026 ರಂದು ಕಾರ್ಯಾದೇಶ ನೀಡಲಾಗಿದ್ದು, ದಿನಾಂಕ 2.3.2026 ರಿಂದ ಕಡ್ಡಾಯವಾಗಿ ಸ್ಮಾರ್ಟ್ ಮೀಟರ್ ಅಳವಡಿಸಲಾಗುತ್ತಿದೆ. ಕಲಬುರಗಿ ಜಿಲ್ಲೆಯಲ್ಲಿ ಈವರೆಗೆ ಕಲಬುರಗಿ ತಾಲ್ಲೂಕಿನ ಕಲಬುರಗಿ ನಗರದಲ್ಲಿ ಒಂದು ಹೊಸ ತಾತ್ಕಾಲಿಕ ಸ್ಥಾವರಕ್ಕೆ ಸ್ಮಾರ್ಟ್ ಮೀಟರ್ ಅಳವಡಿಸಿ ವಿದ್ಯುತ್ ಸಂಪರ್ಕವನ್ನು ಕಲ್ಪಿಸಲಾಗಿದೆ. |
| ಆ) | ಸ್ಮಾರ್ಟ್ ಮೀಟರ್ ಅಳವಡಿಸಿದ ನಂತರ ವಿದ್ಯುತ್ ಬಿಲ್ ಅತಿಯಾಗಿ ಬರುತ್ತಿದೆ ಎಂದು ಸಾರ್ವಜನಿಕರಿಂದ ಎಷ್ಟು ದೂರುಗಳು ಬಂದಿವೆ ಮತ್ತು ಈ ಬಗ್ಗೆ ಸರ್ಕಾರ ನಡೆಸಿದ ತಾಂತ್ರಿಕ ತಪಾಸಣೆಯ ವರದಿಗಳೇನು: | ಪ್ರಸ್ತುತ ಜೆಸ್ಕಾಂ ವ್ಯಾಪ್ತಿಯಲ್ಲಿ ಇಲ್ಲಿಯವರೆಗೆ ಗ್ರಾಹಕರು /ಸಾರ್ವಜನಿಕರಿಂದ ಸ್ಮಾರ್ಟ್ ಮೀಟರ್ ಅಳವಡಿಕೆಯಿಂದ ಅತಿಯಾದ ವಿದ್ಯುತ್ ಬಿಲ್ ಬರುತ್ತಿದೆಯೆಂದು ಯಾವುದೇ ದೂರುಗಳು ಸ್ವೀಕೃತವಾಗಿರುವುದಿಲ್ಲ. |
| ಇ) | ಗ್ರಾಹಕರಿಗೆ ಮೀಟರ್ ರೀಡಿಂಗ್‌ನಲ್ಲಿ ಸಂಶಯವಿದ್ದಲ್ಲಿ, ಅದನ್ನು ಉಚಿತವಾಗಿ ಅಥವಾ ರಿಯಾಯಿತಿ ದರದಲ್ಲಿ ಪರೀಕ್ಷಿಸಲು ಜಿಲ್ಲಾಮಟ್ಟದಲ್ಲಿ 'ಸ್ವತಂತ್ರ ಪರೀಕ್ಷಾ ಕೇಂದ್ರ'ಗಳು (Independent Testing Labs) ಕಾರ್ಯನಿರ್ವಹಿಸುತ್ತಿವೆಯೇ: | ಜೆಸ್ಕಾಂ ವ್ಯಾಪ್ತಿಯಲ್ಲಿ ಸ್ಮಾರ್ಟ್ ಮೀಟರ್ ಟೆಸ್ಟ್ ಬೆಂಚ್ ನ್ನು ಸ್ಥಾಪಿಸಲು ಮೆ. ಝುರಾ ಇಂಡಿಯಾ ಪ್ರೈ. ಲಿ., ಗುಜರಾತ್ ಇವರಿಗೆ ದಿನಾಂಕ 13.02.2026 ರಂದು ಖರೀದಿ ಆದೇಶ ನೀಡಲಾಗಿದ್ದು, ಕಲಬುರಗಿ, ರಾಯಚೂರು ಮತ್ತು ಬಳ್ಳಾರಿ ನಗರಗಳಲ್ಲಿ ಸ್ಮಾರ್ಟ್ ಮೀಟರ್ ಟೆಸ್ಟ್ ಬೆಂಚ್ ಅಳವಡಿಸಲಾಗುತ್ತಿದೆ. ಗ್ರಾಹಕರಿಗೆ ಮೀಟರ್ ರೀಡಿಂಗ್ ನಲ್ಲಿ ಸಂಶಯ ವಿದ್ದಲ್ಲಿ, ಪ್ರತಿ ಪರೀಕ್ಷೆಗೆ KERC ನಿಯಮಾವಳಿಯಂತೆ ಮೀಟರ್ ಪರೀಕ್ಷೆ ಶುಲ್ಕ ಪಡೆಯಲಾಗುವುದು (ಗೃಹ ಬಳಕೆ ಮತ್ತು ವಾಣಿಜ್ಯ ಸ್ಥಾವರಗಳಿಗೆ ರೂ. 100/-, ಇತರೆ ಎಲ್ . ಟಿ ಸ್ಥಾವರಗಳಿಗೆ ರೂ. 200/-, ಎಲ್ಲಾ ಎಚ್ . ಟಿ ಸ್ಥಾವರಗಳಿಗೆ ರೂ. 500/- ರಂತೆ). |
| ಈ) | ಜಿಲ್ಲೆಯ ರೈತರಿಗೆ ಹಗಲು ವೇಳೆ ಗುಣಮಟ್ಟದ ವಿದ್ಯುತ್ ನೀಡಲು 'ಫೀಡರ್ ವಿಭಜನೆ' (Feeder Segregation) ಯೋಜನೆಯು ಎಷ್ಟು ಗ್ರಾಮಗಳಲ್ಲಿ ಪೂರ್ಣಗೊಂಡಿದೆ ಮತ್ತು ಬಾಕಿ ಇರುವ ಗ್ರಾಮಗಳಿಗೆ ಯಾವ ಕಾಲಮಿತಿಯೊಳಗೆ ಸೌಲಭ್ಯ ಒದಗಿಸಲಾಗುವುದು: | ಕಲಬುರಗಿ ಜಿಲ್ಲೆಯಲ್ಲಿ ರೈತರಿಗೆ ಹಗಲು ವೇಳೆ 3 ಫೇಸ್ ವಿದ್ಯುತ್ ನೀಡಲು 'ಫೀಡರ್ ವಿಭಜನೆ" (Feeder Segregation) ಪೂರ್ಣಗೊಂಡಿರುವ ಮತ್ತು ಬಾಕಿ ಇರುವ ಗ್ರಾಮಗಳ ವಿವರ **ಅನುಬಂಧ -1** ರಲ್ಲಿ ಒದಗಿಸಲಾಗಿದೆ.<br>ಬಾಕಿ ಇರುವ 25 ಗ್ರಾಮಗಳಲ್ಲಿ 'ಫೀಡರ್ ವಿಭಜನೆ" ಕಾಮಗಾರಿಯನ್ನು ಕೈಗೊಳ್ಳಬೇಕಾಗಿದೆ. |

| | | |
|---|---|---|
| ಉ) | ಜಿಲ್ಲೆಯ ಗ್ರಾಮೀಣ ಪ್ರದೇಶಗಳಲ್ಲಿ ಸುಟ್ಟ ಟ್ರಾನ್ಸ್‌ಫಾರ್ಮರ್ ಗಳನ್ನು (TC) 24 ರಿಂದ 48 ಗಂಟೆಗಳ ಒಳಗೆ ಬದಲಾಯಿಸಲು ಇರುವ 'ತುರ್ತು ಕಾರ್ಯಪಡೆ'ಗಳ (Task Force)ಸಂಖ್ಯೆ ಎಷ್ಟು ಹಾಗೂ ಈ ಕಾರ್ಯಕ್ಕಾಗಿ ಬೇಕಾದ ವಾಹನ ಮತ್ತು ಸಿಬ್ಬಂದಿ ಕೊರತೆಯನ್ನು ನೀಗಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು? | KERC Standards of Performance (SoP) ಪ್ರಕಾರ ವಿದ್ಯುತ್ ಪರಿವರ್ತಕ ವಿಫಲಗೊಂಡಲ್ಲಿ, ಗ್ರಾಮೀಣ ಪ್ರದೇಶಗಳಲ್ಲಿ 72 ಗಂಟೆಗಳೊಳಗೆ ವಿಫಲಗೊಂಡ ಪರಿವರ್ತಕಗಳನ್ನು ಬದಲಾಯಿಸಲಾಗುತ್ತಿದೆ.<br>ಗ್ರಾಹಕರು ಪರಿವರ್ತಕ ವಿಫಲಗೊಂಡ ಮಾಹಿತಿಯನ್ನು ತುರ್ತಾಗಿ ನೀಡಲು TOLL FREE ನಂಬರ್ 1912 ಸೌಲಭ್ಯವನ್ನು ಕಲ್ಪಿಸಲಾಗಿದೆ ಹಾಗೂ ಸಂಬಂಧಿತ ಶಾಖಾಧಿಕಾರಿ/ಉಪ-ವಿಭಾಗಾಧಿಕಾರಿ ಯವರ ಮೊಬೈಲ್ ಸಂಖ್ಯೆಗೂ ಸಹ ಕರೆ ಮಾಡಿ ತಿಳಿಸಬಹುದಾಗಿರುತ್ತದೆ.<br>ವಿತರಣಾ ಪರಿವರ್ತಕ ಕೇಂದ್ರಗಳಲ್ಲಿ (Distribution Transformer Centre) ತಾಂತ್ರಿಕ ದೋಷ ಉಂಟಾದಾಗ ಪವರ್ ಮ್ಯಾನ್ ಹಾಗೂ ಸಂಬಂಧಪಟ್ಟ ಕ್ಷೇತ್ರ ಶಾಖಾಧಿಕಾರಿಯವರು ಪರೀಶಿಲಿಸಿ, ಸ್ಥಳದಲ್ಲಿಯೇ ತಾಂತ್ರಿಕ ದೋಷವನ್ನು ಸರಿಪಡಿಸುತ್ತಿರುತ್ತಾರೆ. ಆದರೆ ಪರಿವರ್ತಕ ವಿಫಲಗೊಂಡಲ್ಲಿ, ದುರಸ್ತಿ ಕೇಂದ್ರಗಳಲ್ಲಿ ದುರಸ್ತಿಗೊಳಿಲಾಗುತ್ತಿದೆ.<br>ವಿಫಲಗೊಂಡ ಪರಿವರ್ತಕಗಳನ್ನು ಶೀಘ್ರವಾಗಿ ದುರಸ್ತಿಗೊಳಿಸಲು ಅನುಕೂಲವಾಗುವಂತೆ ಗುಲಬರ್ಗಾ ಜಿಲ್ಲೆಯಲ್ಲಿ ಒಟ್ಟು 12 ವಿದ್ಯುತ್ ಪರಿವರ್ತಕ ದುರಸ್ತಿ ಕೇಂದ್ರಗಳಿದ್ದು, ತಾಲ್ಲೂಕುವಾರು ವಿವರ **ಅನುಬಂಧ - 2** ರಲ್ಲಿ ಒದಗಿಸಲಾಗಿದೆ. |

ಸಂಖ್ಯೆ: ಎನರ್ಜಿ 103 ಇಬಿಎಸ್ 2026

(ಕೆ.ಜೆ.ಜಾರ್ಜ್)
ಇಂಧನ ಸಚಿವರು

**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ತಿಪ್ಪಣ್ಣ ಕಮಕನೂರ ರವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ1865ಕ್ಕೆ ಅನುಬಂಧ-1**

**ಕಲಬುರಗಿ ಜಿಲ್ಲೆಯಲ್ಲಿ ರೈತರಿಗೆ ಹಗಲು ವೇಳೆ 3 ಫೇಸ್ ವಿದ್ಯುತ್ ನೀಡಲು 'ಫೀಡರ್ ವಿಭಜನೆ" (Feeder Segregation) ಪೂರ್ಣಗೊಂಡಿರುವ ಮತ್ತು ಬಾಕಿ ಇರುವ ಗ್ರಾಮಗಳ ವಿವರಗಳು**

| ಕ್ರ.ಸ | ವಿಭಾಗ | ತಾಲ್ಲೂಕು - ವಿ.ಸ.ಕಂ ಉಪ ವಿಭಾಗ | ಪ್ರತ್ಯೇಕ ಕೃಷಿ ಫೀಡರ್ ಸಂಖ್ಯೆ | ಪೂರ್ಣಗೊಂಡಿರುವ ಗ್ರಾಮಗಳ ಸಂಖ್ಯೆ | ಬಾಕಿ ಇರುವ ಗ್ರಾಮಗಳ ಸಂಖ್ಯೆ |
|---|---|---|---|---|---|
| 1 | ಕಲಬುರಗಿ ಗ್ರಾಮೀಣ 1 | ಅಫಜಲ್ಪುರ | 31 | 49 | 0 |
| 2 | | ಅಫಜಲ್ಪುರ - ಚೌಡಾಪುರ | 23 | 58 | 0 |
| 3 | | ಆಳಂದ | 27 | 98 | 0 |
| 4 | | ಆಳಂದ - ಕಡಗಂಚಿ | 15 | 54 | 0 |
| 5 | | ಕಲಬುರಗಿ - ಗುಲ್ಬರ್ಗ RSD | 26 | 113 | 0 |
| 6 | | ಕಲಬುರಗಿ - ಕಮಲಾಪುರ | 11 | 101 | 0 |
| 7 | ಕಲಬುರಗಿ ಗ್ರಾಮೀಣ - 2 | ಚಿತ್ತಾಪುರ | 4 | 54 | 0 |
| 8 | | ಜೇವರ್ಗಿ | 21 | 84 | 0 |
| 9 | | ಕಾಳಗಿ | 13 | 94 | 0 |
| 10 | | ಶಹಾಬಾದ್ | 7 | 68 | 0 |
| 11 | | ಯಡ್ರಾಮಿ | 12 | 64 | 0 |
| 12 | ಸೇಡಂ | ಸೇಡಮ್ | 16 | 114 | 0 |
| 13 | | ಚಿಂಚೋಳಿ | 10 | 60 | 25 |
| ಒಟ್ಟು | | | **216** | **1011** | **25** |

## ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ತಿಪ್ಪಣ್ಣ ಕಮಕನೂರ ರವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ1865ಕ್ಕೆ ಅನುಬಂಧ-2

## ಗುಲಬರ್ಗಾ ಜಿಲ್ಲೆಯ ವಿದ್ಯುತ್ ಪರಿವರ್ತಕ ದುರಸ್ತಿ ಕೇಂದ್ರಗಳ ತಾಲ್ಲೂಕುವಾರು ವಿವರಗಳು

| ತಾಲ್ಲೂಕು | ದುರಸ್ತಿ ಕೇಂದ್ರ ಹೆಸರು |
|---|---|
| ಕಲಬುರಗಿ | ಮೆ. ಕೈಲಾಷ್ ಟ್ರಾನ್ಸ್ಪಾರ್ಮರ್ ಪ್ರೈ. ಲಿ |
| | ಮೆ. ಮಾಸ್ಟರ್ ಎಲೆಕ್ಟ್ರಿಕಲ್ |
| ಅಫಜಲಪುರ | ಮೆ. ಶ್ರೀ ಭವಾನಿ ಎಲೆಕ್ಟ್ರಿಕಲ್ಸ |
| | ಮೆ. ಶ್ರೀ ರಾಘವೇಂದ್ರ ಎಲೆಕ್ಟ್ರಿಕಲ್ಸ |
| ಆಳಂದ | ಮೆ. ಬಿ. ಕೆ. ಜಿ ಇಂಡಸ್ಟ್ರೀಸ್ |
| | ಮೆ. ರೇಹಾನ್ ಎಲೆಕ್ಟ್ರಿಕಲ್ಸ |
| ಕಮಲಾಪೂರ | ಮೆ. ಶ್ರೀ ಮಾರುತಿ ಎಲೆಕ್ಟ್ರಿಕಲ್ಸ, |
| ಜೇವರ್ಗಿ | ಮೆ. ನವರಂಗ ಟ್ರಾನ್ಸ್ ಫಾರ್ಮರ್ |
| ಚಿತ್ತಾಪುರ | ಮೆ. ಮಾಸ್ಟರ್ ಎಲೆಕ್ಟ್ರಿಕಲ್ಸ |
| ಶಹಾಬಾದ್ | ಮೆ. ಏ. ಕೆ ಎಂಟರ್ ಪ್ರೈಸೆಸ್ |
| ಚಿಂಚೋಳಿ | ಮೆ. ಹೈ ಎನರ್ಜಿ ಸಿಸ್ಟಮ್ಸ್ |
| ಸೇಡಂ | ಮೆ. ಸನ್ಮತಿ ಎಲಕ್ಟ್ರೋ ಸೆಂಟರಿಂಗ್ |

**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ತಿಪ್ಪಣ್ಣ ಕಮಕನೂರ ರವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ1865ಕ್ಕೆ ಅನುಬಂಧ-2**

**ಗುಲಬರ್ಗಾ ಜಿಲ್ಲೆಯ ವಿದ್ಯುತ್ ಪರಿವರ್ತಕ ದುರಸ್ತಿ ಕೇಂದ್ರಗಳ ತಾಲ್ಲೂಕುವಾರು ವಿವರಗಳು**

| ತಾಲ್ಲೂಕು | ದುರಸ್ತಿ ಕೇಂದ್ರ ಹೆಸರು |
| --- | --- |
| ಕಲಬುರಗಿ | ಮೆ. ಕೈಲಾಷ್ ಟ್ರಾನ್ಸ್ಫಾರ್ಮರ್ ಪ್ರೈ. ಲಿ |
| | ಮೆ. ಮಾಸ್ಟರ್ ಎಲೆಕ್ಟ್ರಿಕಲ್ |
| ಅಫಜಲಪುರ | ಮೆ. ಶ್ರೀ ಭವಾನಿ ಎಲೆಕ್ಟ್ರಿಕಲ್ಸ |
| | ಮೆ. ಶ್ರೀ ರಾಘವೇಂದ್ರ ಎಲೆಕ್ಟ್ರಿಕಲ್ಸ |
| ಆಳಂದ | ಮೆ. ಬಿ. ಕೆ. ಜಿ ಇಂಡಸ್ಟ್ರೀಸ್ |
| | ಮೆ. ರೇಹಾನ್ ಎಲೆಕ್ಟ್ರಿಕಲ್ಸ |
| ಕಮಲಾಪೂರ | ಮೆ. ಶ್ರೀ ಮಾರುತಿ ಎಲೆಕ್ಟ್ರಿಕಲ್ಸ, |
| ಜೇವರ್ಗಿ | ಮೆ. ನವರಂಗ ಟ್ರಾನ್ಸ್ ಫಾರ್ಮರ್ |
| ಚಿತ್ತಾಪುರ | ಮೆ. ಮಾಸ್ಟರ್ ಎಲೆಕ್ಟ್ರಿಕಲ್ಸ |
| ಶಹಾಬಾದ್ | ಮೆ. ಏ. ಕೆ ಎಂಟರ್ ಪ್ರೈಸೆಸ್ |
| ಚಿಂಚೋಳಿ | ಮೆ. ಹೈ ಎನರ್ಜಿ ಸಿಸ್ಟಮ್ಸ್ |
| ಸೇಡಂ | ಮೆ. ಸನ್ಮತಿ ಎಲಕ್ಟ್ರೋ ಸೆಂಟರಿಂಗ್ |